19)	Lewis Staley Associates Inc	-	Not indicated.
20)	Syed Khalil Dubai	-	Hospet
21)	Asia Power Gen.International U.S.A.	-	Bangalore.
22)	India Power Partners, Consortium	-	Not specified.
23)	John Brown/VMP Oil Co., Trafalga House.	-	Near Karwar
24)	Public Power International USA	-	Raichur, Chamalapur.
25)	Caithness, USA	-	Bedthi, Dandeli
26)	Condotte, Italy	-	Shivasamudram.

ರೀಮೇಕ್ ಚಿತ್ರಗಳಿಗೆ ಸಬ್ಸಿಡಿ ರದ್ದತಿ

187 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಜೀರಾದ್) : ಮಾನ್ಯ ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕನ್ನಡ ಚಲನಚಿತ್ರಗಳಿಗೆ ಈಗ ಎಷ್ಟು ಮೊತ್ತದ ಸಹಾಯಧನವನ್ನು ನೀಡಲಾಗುತ್ತಿದೆ?

ಆ) ಸಹಾಯಧನ ನೀಡಲು ಯಾವ ಯಾವ ಕ್ರಮಗಳನ್ನು ಅನುಸರಿಸಲಾಗುತ್ತಿದೆ?

ಇ) ಇತ್ತೀಚೆಗೆ ಕನ್ನಡದ ಮೂಲ ಕಥೆಗಳು ಕಡಿಮೆಯಾಗಿ ಪರಭಾಷೆಯ ರಿಮೇಕ್ ಚಿತ್ರಗಳ ಹಾವಳಿ ಹೆಚ್ಚಾಗುತ್ತಿರುವುದನ್ನು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಕನ್ನಡದಲ್ಲಿರುವ ಉತ್ತಮ ಕಥೆಗಳು ಚಲನಚಿತ್ರವಾಗಲು ಸಹಾಯ ಮಾಡುವ ಸಲುವಾಗಿ ಪರಭಾಷೆಯಿಂದ ರಿಮೇಕ್ ಆದ ಚಿತ್ರಗಳಿಗೆ ಸಹಾಯಧನ ನಿಲ್ಲಿಸಲಾಗುವುದೇ?

ಉ) ಇಲ್ಲದಿದ್ದಲ್ಲಿ ಕಾರಣಗಳೇನು ?

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ವಾರ್ತಾ ಪ್ರಚಾರ ಸಚಿವರು) :

ಅ) ಕನ್ನಡ ಚಲನಚಿತ್ರಗಳಿಗೆ 4 ಲಕ್ಷ ರೂ. ಸಹಾಯಧನ ನೀಡಲಾಗುತ್ತಿದೆ. ಕಲಾತ್ಮಕ ಚಿತ್ರವೆಂದು ಪರಿಗಣಿಸಲ್ಪಟ್ಟ ಚಿತ್ರಕ್ಕೆ 1.00 ಲಕ್ಷ ರೂ. ಹೆಚ್ಚುವರಿ ಸಹಾಯಧನ ನೀಡಲಾಗುತ್ತಿದೆ.

ಆ) ಚಲನಚಿತ್ರ ತಯಾರಿಸುವ ಮುಂಚೆ ಇಲಾಖೆಗೆ ತಿಳಿಸಿ ರಾಜ್ಯದಲ್ಲಿ ಕನಿಷ್ಠ ಶೇ. 85ರ ಚಿತ್ರೀಕರಣ ನಡೆಸಬೇಕು. ಸೆನ್ಸಾರ್ ಆದಬಳಿಕ 3 ತಿಂಗಳೊಳಗೆ ನಿಗಧಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಬೇಕಾಗುತ್ತದೆ. ಈ ಬಗ್ಗೆ ವಿವರವಾದ ನಿಯಮಾವಳಿಗಳನ್ನು ರಚಿಸಲಾಗಿದೆ.

ಇ) ಹೌದು.

ಈ) ರಿಮೇಕ್ ಚಿತ್ರಗಳಿಗೆ ಸಹಾಯಧನ ನೀಡುತ್ತಿಲ್ಲ; ಮತ್ತು ನೀಡುವ ಅಲೋಚನೆಯೂ ಇಲ್ಲ.

ಉ) ಉದ್ಭವಿಸುವುದಿಲ್ಲ.

ವಿದ್ಯುತ್ ದರವನ್ನು ಹೆಚ್ಚಿಸುವ ಬಗ್ಗೆ.

188 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈಗ ಜಾರಿಯಲ್ಲಿರುವ ಗ್ರಾಹಕರ ವಿದ್ಯುತ್ ದರಗಳ ವಿವರಗಳೇನು.

ಆ) ಆ ದರಗಳನ್ನು ಯಾವಾಗಿನಿಂದ ಪರಿಷ್ಕರಣೆ ಮಾಡಲಾಗಿತ್ತು.

ಇ) ಈಗಿರುವ ಗ್ರಾಹಕರ ವಿದ್ಯುತ್ ದರಗಳನ್ನು ಹೆಚ್ಚಿಸುವ ವಿಚಾರ ಪರಿಶೀಲನೆಯಲ್ಲಿದೆಯೇ?

ಈ) ಹಾಗಿದ್ದಲ್ಲಿ ಪ್ರತಿ ಯೂನಿಟ್ಟಿಗೆ ಅಂದಾಜು ಎಷ್ಟು ದರಗಳನ್ನು ಹೆಚ್ಚಿಸಲಾಗುವುದು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಈಗ ಜಾರಿಯಲ್ಲಿರುವ ವಿದ್ಯುತ್ ದರಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಆ) 1-8-93 ರಿಂದ ಜಾರಿಗೆ ಬರುವಂತೆ ದರಗಳ ಪರಿಷ್ಕರಣೆ ಮಾಡಲಾಗಿತ್ತು.

ಇ) ಹೌದು.

ಈ) ಪ್ರಸ್ತಾವನೆಯ ಮೇಲೆ ಅಂತಿಮ ನಿರ್ಣಯ ತೆಗೆದುಕೊಂಡಿಲ್ಲದಿರುವುದರಿಂದ, ಪ್ರಸ್ತುತ ಹೆಚ್ಚಿನ ದರದ ಬಗ್ಗೆ ವಿವರ ನೀಡಲು ಸಾಧ್ಯವಿಲ್ಲ.

ಅನುಬಂಧ

1.8.1993 ರಿಂದ ಜಾರಿಯಲ್ಲಿರುವ ವಿದ್ಯುಚ್ಛಕ್ತಿ ದರಗಳ ವಿವರಗಳು :

1. ಶುಲ್ಕ ಪದ್ಧತಿ ಸೂಚಿ : ಹೆಚ್.ಟಿ. 1

(ಸಾರ್ವಜನಿಕ ನೀರು ಸರಬರಾಜು ಮತ್ತು ಒಳಚರಂಡಿ ಸ್ಥಾವರಗಳು)

ದರಸೂಚಿ :

ಡಿಮ್ಯಾಂಡ್ ಶುಲ್ಕ : ಪ್ರತಿ ಕೆ.ವಿ.ಎ.ಗೆ ರೂ. 75.00

ಮತ್ತು

ವಿದ್ಯುತ್ ಬಳಕೆ ಶುಲ್ಕ : ಪ್ರತಿ ಯೂನಿಟಗೆ 130 ಪೈಸೆಗಳು.